ಸಂಪುಟ: ೩ ಸಂಚಿಕೆ: ೬ ಪುಟ: ೪ ನವೆಂಬರ್ ೨೦೧೮
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು: ಡಾ.ಎಂ.ಸಿ.ಮನೋಹರ ಸಂಚಿಕೆ ಸಂಪಾದಕರು: ರಮೇಶ್ ಪಿ.
www.arivu.org | e-mail: info@arivu.org ೯೪೮೨೨ ೭೭೮೭೨





## ಕನ್ನಡ ರಾಜ್ಯೋತ್ಸವಕ್ಕೆ ಕವಿಗೋಷ್ಠಿಯ ಮೆರುಗು




ಸ್ವರಚಿತ ಕವನ ವಾಚಿಸಿದ ಪೋಷಕರು, ಶಿಕ್ಷಕರು, ಆಡಳಿತ ಮಂಡಳಿ ಸದಸ್ಯರು

ಕನ್ನಡದ ಮೇಲಿನ ಕಳಕಳಿಯಿಂದ ರಾಷ್ಟ್ರಕವಿ ಕುವೆಂಪು ಅವರು 'ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ' ಎಂದು ಕರೆ ಕೊಟ್ಟಿದ್ದರು. ಈ ನಿಟ್ಟಿನಲ್ಲಿ ಅರಿವು ಶಾಲೆ ಶಿಕ್ಷಣ ಮಾಧ್ಯಮವಾಗಿಯೂ, ಅಭಿವ್ಯಕ್ತಿ ಮಾಧ್ಯಮವಾಗಿಯೂ ಕನ್ನಡವನ್ನು ಅಳವಡಿಸಿ ಕೊಂಡು ಮಕ್ಕಳಲ್ಲಿ ಭಾಷೆಯನ್ನು ಉತ್ತೇಜಿಸುವ ಪ್ರಯತ್ನದಲ್ಲಿದೆ. ಮಕ್ಕಳಿಗೆ ಕತೆ–ಕವನ ಬರೆಯಲು, ಹಾಡಲು, ಓದಲು ಉತ್ತೇಜಿಸುವುದರ ಜೊತೆಗೆ ಭಾಷಾ ಸೌಂದರ್ಯ ಸವಿಯಲು ವಿವಿಧ ಕನ್ನಡ ಪ್ರಕಾರಗಳ ಪ್ರದರ್ಶನವನ್ನು ಏರ್ಪಡಿಸುತ್ತಿದೆ.

ಅಂತೆಯೆ, ಈ ವರ್ಷ ಕನ್ನಡ ರಾಜ್ಯೋತ್ಸವನ್ನು ವಿಶಿಷ್ಟವಾಗಿ ಆಚರಿಸಲು ಮತ್ತು ಪೋಷಕರಲ್ಲಿರುವ ಕವಿತ್ವವನ್ನು ಹೊರತರಲು ನಿರ್ಧರಿಸಲಾಗಿತ್ತು. ಅದರಂತೆ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸ್ವರಚಿತ ಕವನಗಳನ್ನು ವಾಚಿಸುವಂತೆ ಪೋಷಕರನ್ನು ಕೋರ ಲಾಯಿತು. ಹಲವು ಪೋಷಕರು ಉತ್ಸಾಹದಿಂದ ತಯಾ ರಾಗಿ ಮತ್ತು ಮುಂಚಿತವಾಗಿಯೇ ತಿಳಿಸಿ ಸಹಕರಿಸಿದರು.

ಅಂದಿನ ಕಾರ್ಯಕ್ರಮವನ್ನು ಮುಖ್ಯಶಿಕ್ಷಕಿ ಎಂ.ಮಂಜುಳಾ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸುದರ್ಶನ, ಕಿರಣ್ ಭಾಟ್ನಿ, ಯತೀಶ್ ಕೊಳ್ಳೇಗಾಲ, ಗುರುಪ್ರಸಾದ್ ಕಥಾವಟೆ, ಪ್ರತೀಕ್ಷಾ, ಪಿ.ಪಿ. ಕಿರಣ್ ಮತ್ತು ಮಂಜುಳಾ ಅವರು ಕವನಗಳನ್ನು ವಾಚಿಸಿದರು. 'ಗೊರಕೆ' ಕವನವು ನಗು ಹಾಸ್ಯದಿಂದ ವಾಸ್ತವ ತಿಳಿಸಿದರೆ, ಗಂಭೀರ ಪದಗಳ 'ದೇವಮಾನವ' ಯಾರು ಎಂದು ಯೋಚಿಸುವಂತಾಯಿತು. ಪುಟ ೩ಕ್ಕೆ

### 'ನಮ್ಮ ಕನ್ನಡಂಗಳ್' ಲೋಕಾರ್ಪಣೆ

ಅರಿವು ಬಳಗದ ವತಿಯಿಂದ 'ನಮ್ಮ ಕನ್ನಡಂಗಳ್' ಎಂಬ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿದ್ದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಮತ್ತೊಂದು ವಿಶೇಷ ಎನಿಸಿತು. ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಕನ್ನಡಿಗರ ಆಡುಭಾಷೆ ಪ್ರತಿ ಪ್ರಾಂತ್ಯದಲ್ಲೂ ತನ್ನದೇ ಆದ ಶೈಲಿ ಮತ್ತು ವೈಶಿಷ್ಟ್ಯ ಹೊಂದಿದೆ. ಕರ್ನಾಟಕದೆಲ್ಲೆಡೆ ಆಡುಭಾಷೆ ಕನ್ನಡವೇ ಆದರೂ ಉಚ್ಚಾರ, ಪದಗಳ ಓಗ, ನುಡಿಗಳ ರಾಗ ವಿಭಿನ್ನವಾಗಿದೆ. ತನ್ನ ಪಕ್ಕದ ಇತರ ನೆಲದ ಭಾಷೆಯ ನೆರಳನ್ನೂ ಪಡೆದು ಸಂಪದ್ಭರಿತವಾಗಿದೆ. ಇವೆಲ್ಲವುಗಳ ಕಿರುಪರಿಚಯ ಮಾಡಿಸುವ ಸಲುವಾಗಿ ಭಾಷಾ ತಜ್ಞರೂ, ನಮ್ಮ ಶಾಲೆಯ ಪೋಷಕರೂ ಆದ ಚಲಪತಿ ಅವರ ಮಾರ್ಗದರ್ಶನದಲ್ಲಿ 'ನಮ್ಮ ಕನ್ನಡ' ವೆಬ್‌ಚಾನಲ್ ಸಹಯೋಗದಲ್ಲಿ ಮೂಡಿಬಂದಿರುವುದೇ 'ನಮ್ಮ ಕನ್ನಡಂಗಳ್'. ಈ ಸಾಕ್ಷ್ಯಚಿತ್ರವನ್ನು ಹಿರಿಯ ಪತ್ರಕರ್ತರಾದ ಜಿ.ಪಿ.ಬಸವರಾಜು ಬಿಡುಗಡೆ ಮಾಡಿ ಸಮಾರಂಭವನ್ನು ಸಂಪನ್ನಗೊಳಿಸಿದರು. ಕನ್ನಡ ಭಾಷೆಯ ಹಿರಿಮೆ–ಗರಿಮೆಗಳನ್ನು ತಮ್ಮ ಮಿತ ಭಾಷೆಯಲ್ಲಿ ತಿಳಿಸಿ, ಅರಿವು ಪ್ರಯತ್ನಗಳನ್ನು ಬೆಂಬಲಿಸಿ ಶುಭ ಹಾರೈಸಿದರು.

– ರಜನಿ ಜೆ., ಶಿಕ್ಷಕಿ

## ಎಲ್ಲವೂ ಕನ್ನಡವೇ ನನಗೆ

ಟೀಚರ್ ಆಗಬೇಕು ಅನ್ನೋದು ನನ್ನ ದೊಡ್ಡ ಕನಸು. ಈ ಕನಸು ನನ್ನೊಳಗೆ ಹುಟ್ಟಿದ್ದಕ್ಕೆ ನನಗೆ ಪಾಠ ಹೇಳುತ್ತಿದ್ದ ಟೀಚರುಗಳೇ ಕಾರಣವಾಗಿರಬೇಕು. ೩೦–೪೦ ವರುಷಗಳ ಹಿಂದೆ ಹತ್ತನೇ ತರಗತಿ ಮುಗಿದರೆ ಟಿಸಿಎಚ್ ತರಬೇತಿ ಪಡೆದು ಟೀಚರ್ ಆಗೋದಕ್ಕೆ ಅವಕಾಶ ಇತ್ತು. ಹತ್ತನೇ ತರಗತಿ ಮುಗಿಸಿ ಟಿಸಿಎಚ್ ಮಾಡೋಕೆ ಅರ್ಜಿ ಹಾಕಿದ್ದೆ. ಅಂಚೆ ಕಾರ್ಡು ಒಂದು ದಿನ ಲೇಟಾಗಿದ್ದರಿಂದ ನನ್ನ ಬಯಕೆ ಈಡೇರಲಿಲ್ಲ.

ಓದನ್ನು ಮುಂದುವರೆಸಿ ಪಿಯುಸಿಯಲ್ಲಿ ವಿಜ್ಞಾನ ತೆಗೆದುಕೊಂಡೆ. ಆಗ ಅಗ್ರಿಕಲ್ಚರ್ ವಿಜ್ಞಾನದ ಹಗಲು ಕನಸೊಂದನ್ನು ಕಂಡೆ. ಗಣಿತ ಮತ್ತು ಭೌತಶಾಸ್ತ್ರಗಳು ನನ್ನನ್ನು ಮುಂದೆ ತಳ್ಳಲಿಲ್ಲ. ಆ ಹೊತ್ತಿಗೆ ಸಾಹಿತ್ಯದ ಓದಿನ ತುಡಿತ ಸಣ್ಣದಾಗಿ ಶುರುವಾಗಿ ಪದ್ಯಗಳನ್ನು ಬರೆಯತೊಡಗಿದ್ದೆ.

ವೃತ್ತಿಯ ವೃತ್ತಾಂತ



ವಿಜ್ಞಾನವನ್ನು ಬಿಟ್ಟೆ. ಆರ್ಟ್ಸ್ ಪಾಸು ಮಾಡಿ ಬಿ.ಎ.ಗೆ ಸೇರಿಕೊಂಡು ಕನ್ನಡ ಸಾಹಿತ್ಯ ತಗೊಂಡೆ. ಮುಂದೆ ಕನ್ನಡ ಎಂ.ಎ. ಮಾಡಲು ಇದು ದಾರಿಯಾಯಿತು.

ಬಿ.ಎ. ಮಾಡುವಾಗ ಕತೆ, ಕಾದಂಬರಿಗಳ ಒಡನಾಟ ಬೆಳೆಯಿತು. ಗೆಳೆಯ–ಗೆಳತಿಯರ ಸಹವಾಸದಲ್ಲಿ ಅಲ್ಪಸ್ವಲ್ಪ ಇಂಗ್ಲಿಷ್ ಕೂಡಾ ಸಿಕ್ಕಿತು. ಓದಿನ ಒಡನಾಟ ಕನ್ನಡ ಎಂ.ಎ.ಗೆ ಒಳ್ಳೇ ಬುನಾದಿಯಾಗಿ ರ್‍ಯಾಂಕ್ ಪಡೆಯುವ ಅವಕಾಶ ಒದಗಿಸಿತು. ಎಂ.ಎ. ಮುಗಿದ ವರುಷವೇ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಮೇಷ್ಟ್ರಾಗಿ ಆಯ್ಕೆಯಾದೆ. ನನ್ನ ಕನಸು ನನಸಾಗಿತ್ತು. ಮುಂದೆ ಇದೇ ದಾರಿಯಲ್ಲಿ ನಡೆಸಿದ ಸಂಶೋಧನೆಗಾಗಿ ಪಿಎಚ್‌ಡಿ ಪದವಿ ಯನ್ನೂ ಪಡೆದಿದ್ದೇನೆ.

ಆವತ್ತಿನಿಂದ ಕನ್ನಡ ನುಡಿ, ಸಾಹಿತ್ಯ, ಸಂಸ್ಕೃತಿ ಅಂತಾ ಪಾಠ ಹೇಳುತ್ತಾ ಕಲಿತದ್ದು ನನ್ನನ್ನು ಬೆಳೆಸಿದೆ. ನಾನು ಸರಕಾರಿ ಉದ್ಯೋಗಿ ಆಗಿಲ್ಲ ದಿದ್ದರೂ ಬದುಕಿಗೆ ಬೇಕಾಗುವ ಹಣ, ಪುಟ ೩ಕ್ಕೆ

ರೇಖಾಚಿತ್ರಗಳು: ಅರ್ಚನಾ ಬಿ.

# ನನ್ ಹೆಸ್ರು ಶೀತಲ್ ಅಂತ್ರಿ, ಗುಲ್ಬರ್ಗದಿಂದ ಬಂದಿನ್ರೀ...

ನಾನು ಮೊದಲನೆಯ ಸಲ ಮೈಸೂರಿಗೆ ಬಂದಾಗ ಎಲ್ಲವೂ ವಿಚಿತ್ರವೆನಿಸುತ್ತಿತ್ತು. ಮೂರನೇ ತರಗತಿಯಲ್ಲಿದ್ದಾಗ ಮೊದಲ ಬಾರಿಗೆ ನಾನು ಮೈಸೂರಿಗೆ ಬಂದದ್ದು. ನಾವು ಮೈಸೂರಿನಲ್ಲಿಯೇ ಇದ್ದುಬಿಡಬೇಕೆಂದು ನನ್ನ ಅಪ್ಪ ಇಲ್ಲಿಗೆ ಕರೆ ತಂದದ್ದು. ಆದರೆ ಆಗಿದ್ದೇ ಬೇರೆ. ಆವಾಗ ನಾವೆಲ್ಲ ಇದ್ದದ್ದು ಮೇಟಗಳ್ಳಿಯಲ್ಲಿ. ಅಪ್ಪ, ಅಮ್ಮ ನನ್ನನ್ನು ಅಲ್ಲಿನ ಒಂದು ಶಾಲೆಗೆ ಸೇರಿಸಿದ್ರು. ನನಗೆ ಆ ಶಾಲೆ ನೋಡಿದ್ರೆ ಭಯವಾಗುತ್ತಿತ್ತು. ಯಾಕೆಂದರೆ, ನನಗೆ ಮೊದಲೇ ಮೈಸೂರಿನ ಭಾಷೆ ಬರುತ್ತಿರಲಿಲ್ಲ, ಆದರೆ ಅರ್ಥವಾಗುತ್ತಿತ್ತು.



ಆ ಶಾಲೆಯಲ್ಲಿ ಒಂದು ದಿನ ತರಗತಿಗೆ ಹೋದಾಗ ಒಬ್ಬರು ಶಿಕ್ಷಕಿ ಬಂದು ನೀನು ಎಲ್ಲಿಂದ ಬಂದೆ, ನಿನ್ನ ಹೆಸರೇನು, ನಿನ್ನ ಅಪ್ಪ, ಅಮ್ಮನ ಹೆಸರೇನು ಎಂದು ಕೆಲವೊಂದು ಪ್ರಶ್ನೆಗಳನ್ನು ಕೇಳಿದರು. ನಾನು ನನ್ನ ಭಾಷೆಯಲ್ಲಿ ಹೇಳತೊಡಗಿದೆ. 'ಮಿಸ್ ನನ್ ಹೆಸ್ರು ಶೀತಲ್ ಅಂತ್ರಿ, ನಾ ಗುಲ್ಬರ್ಗದಿಂದ ಬಂದಿನ್ರೀ...' ಅಂಥ ಮಾತಾಡೋಕೆ ಶುರು ಮಾಡಿದೆ. ತಕ್ಷಣ ಎಲ್ಲ ಮಕ್ಕಳು ಮತ್ತು ಶಿಕ್ಷಕಿ ಸೇರಿ ನಗ ತೊಡಗಿದರು. ನನಗಂತೂ ತಲೆಬುಡ ಅರ್ಥ ಆಗಲಿಲ್ಲ. ಆಮೇಲೆ ಆ ಶಿಕ್ಷಕಿ ಹೇಳಿದರು, ನಾವೆಲ್ಲ ಗಂಡನಿಗೆ ಮಾತ್ರ ರೀ ಅಂಥ ಕರೆಯೋದು. ನೀನ್ಯಾಕೆ ರೀ ಸೇರಿಸ್ ಬಿಟ್ಟು ಮಾತಾಡ್ತೀಯಾ? ಅಂದ್ರು. ಅದಕ್ಕೆ ನಾನ್ಹೇಳಿದೆ, ನಮ್ಮೂರಲ್ಲೆಲ್ಲ ಹೀಗೇ ಮಾತಾಡೋದು. ಇದೇ ನನ್ನ ಭಾಷೆ ಅಂಥ. ಆಮೇಲೆ ನಾನ್ ಮಾತಾಡೋದು ಅವರಿಗೆ ಅರ್ಥ ಅಗಿದ್ಯೋ ಇಲ್ವೋ ಒಂದೂ ಗೊತ್ತಿಲ್ಲ.

ನಾನು ತುಂಬಾ ಅಳ್ತಿದ್ದೆ. ಏಕೆಂದರೆ, ನಾನು ಏನು ಹೇಳತ್ತಿದ್ದೆನೋ ಅದ್ಯಾವುದೂ ನನ್ನ ಜತೆ ಓದುತ್ತಿದ್ದ ಮಕ್ಕಳಿಗೆ ಅರ್ಥ ಆಗ್ತ ಇರಲಿಲ್ಲ. ಅವರೇ ಏನೇನೋ ಅಂದ್‌ಕೊಂಡು ಏನೇನೋ ಹೇಳ್ತಾಯಿದ್ರು. ಹೀಗೆ ಒಂದೆರಡು ದಿನ ಹೇಗೋ ಆ ಶಾಲೆಗೆ ಹೋದೆ. ಆಮೇಲೆ ಆ ಶಾಲೇನೇ ಬಿಟ್‌ಬಿಟ್ಟೆ.

ನಾನು ಆ ಶಾಲೆಗೆ ಹೋಗಿದ್ದು ಬರೀ ಒಂದೇ ವಾರ. ಆಮೇಲೆ ಆ ಶಾಲೇನ ತಿರುಗಿಯೂ ನೋಡ್ಲಿಲ್ಲ. ಯಾಕೋ ಈ ಜಾಗಾನೇ ಸರಿಯಿಲ್ಲ, ಎಲ್ಲ ಬರೀ ನಗ್ತಾಯಿರ್ತಾರೆ. ಒಬ್ರುಗೂ ಏನೂ ಅರ್ಥ ಆಗಲ್ಲ ಅಂಥ ಬೈಕೊಂಡು ವಾಪಸ್ ಊರಿಗೆ ಹೋದೆ. ಅಲ್ಲಿ ನನ್ನ ಸ್ನೇಹಿತರಿಗೆಲ್ಲ ಹೇಳ್ತಾಯಿದ್ದೆ, ಲೇ ಮೈಸೂರ್ನಾಗ ಎಲ್ಲ ಬರೀ ಯಾ ಆ ಇಂದನೆ ಅವ್ರ ಪದನ ಮುಗಸ್ತಾರೆ ಅಂಥ. ಯಾಕೆಂದರೆ, ನಾನು ಮೈಸೂರಲ್ಲಿ ಜಾಸ್ತಿ ಪದ ಕೇಳಿಸ್ಕೊಂಡಿದ್ದು ಚೆನ್ನಾಗಿದ್ಯ? ಊಟ ಆಯ್ತಾ? ಅಥವಾ ತಿಂಡಿ ಆಯ್ತಾ ಅಂಥ. ಆಮೇಲೆ ನಾನು ನಾಲ್ಕನೇ ತರಗತಿಗೆ ಅಂದ್ರೆ, ಮೂರನೇ ತರಗತಿ ಮುಗಿದಾದ ಮೇಲೆ ಬರುವ ಬೇಸಿಗೆ ರಜೆಗೆ ಮತ್ತೆ ಮೈಸೂರಿಗೆ ಬಂದೆ. ಆ ರಜೆಯಲ್ಲಿ ನನಗೆಷ್ಟಾಗುತ್ತೋ ಅಷ್ಟು ಭಾಷೆ ಕಲಿತುಕೊಂಡೆ. ಆವಾಗ ನನಗೆ ಗೊತ್ತಾಗಿದ್ದು ಮೈಸೂರಿನ ಜನ ಎಲ್ಲ ಪದವನ್ನೂ ಯ ಅಥವಾ ಆ ಯಿಂದನೆ ಮುಗಿಸಲ್ಲ, ಅಂಥ. ಆದ್ರೆ ಈವಾಗ ಅದನ್ನೆಲ್ಲ ನೆನಪಿಸಿಕೊಂಡರೆ ನಂಗೇ ನಗು ಬರುತ್ತೆ.



ಈವಾಗ ಮೈಸೂರಿನಲ್ಲೇ ಇದ್ದೇನೆ. ಎಲ್ಲರ ಜತೆಗೂ ಹೊಂದಿಕೊಂಡು, ನಾನು ಆಡೋ ಭಾಷೆನಾ ನನ್ನ ಸ್ನೇಹಿತರೂ ಕಲಿತುಕೊಂಡು ಅರ್ಥ ಮಾಡಿಕೊಂಡಿದ್ದಾರೆ. ನಾನೀಗ ಆರಾಮಿದ್ದೀನಿ.

। ಶೀತಲ್, ೯ನೇ ತರಗತಿ

## ಸಂಪಾದಕೀಯ

ಅರಿವು–ಅಂಗಳ ಒಂದೊಳ್ಳೆ ಪ್ರಯತ್ನ. ಯಾರಿಗೆ ಆದರೂ ಏನನ್ನಾದರೂ ಕಲಿಸುವುದು, ಹೇಳಿಕೊಡುವುದು, ಮಾರ್ಗದರ್ಶನ ನೀಡುವುದು ಎಷ್ಟು ಮುಖ್ಯವೋ, ಅದಕ್ಕಿಂತ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸುವುದು ಬಹಳ ಮುಖ್ಯವಾದ ಸಂಗತಿ. ಆ ರೀತಿಯ ಯೋಚನೆಗಳು, ಒಂದಲ್ಲ ಒಂದು ರೀತಿಯ ಪ್ರಯತ್ನಗಳು ಅರಿವುನಲ್ಲಿ ನಡೆಯುತ್ತಲೇ ಇರುತ್ತವೆ. ಒಂದಷ್ಟು ಎಲೆಮರೆಯ ಕಾಯಿಯಂತೆ ದಿನನಿತ್ಯ ನಡೆಯುತ್ತಿದ್ದರೆ, ಮತ್ತೊಂದಷ್ಟು ವಿಚಾರಗಳು ವಿವಿಧ ಬಗೆಯ ಕಾರ್ಯಕ್ರಮಗಳ ಮೂಲಕ ನಿಮಗೆ ಕಾಣಸಿಗುತ್ತವೆ. ಅಂತಹ ಕಾಣಸಿಗುವ ಪ್ರಮುಖ ವಿಚಾರಗಳಲ್ಲಿ ಅಂಗಳವೂ ಒಂದು ಅವಿಭಾಜ್ಯ ಅಂಗವಾಗಿದೆ. ನಮ್ಮೆಲ್ಲರ ಕಲಿಕೆ, ಯೋಚನೆ ಮತ್ತು ಯೋಜನೆಗಳಿಗೆ ಇಂಬು ನೀಡುವ ಅಂಗಳದಂತಹ ಪ್ರಯತ್ನಗಳು ಸದಾ ನಮ್ಮೊಂದಿಗಿರಲಿ ಎಂದು ಬಯಸುತ್ತಾ, ಈ ಬಾರಿಯ ಸಂಚಿಕೆ ಸಂಪಾದನೆಗೆ ಸಹಕರಿಸಿದ ನನ್ನ ಪ್ರೀತಿಯ ಮಕ್ಕಳಿಗೆ ಮತ್ತು ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ.



। ರಮೇಶ್ ಪಿ., ಸಂಚಿಕೆ ಸಂಪಾದಕರು

# ಕಿಟಕಿಯಿಂದ ಕಾಂಚನಜುಂಗ ನೋಡಿದೆ




ನಾನು ದಸರಾ ರಜೆಯಲ್ಲಿ ಅಪ್ಪ–ಅಮ್ಮನ ಜತೆ ಗ್ಯಾಂಗ್‌ಟಾಕ್, ಪೆಲ್ಲಿಂಗ್, ಡಾರ್ಜಿಲಿಂಗ್ ಪ್ರವಾಸಕ್ಕೆ ಹೋಗಿದ್ದೆ. ಗ್ಯಾಂಗ್‌ಟಾಕ್ ಮತ್ತು ಪೆಲ್ಲಿಂಗ್ ಸಿಕ್ಕಿಂನಲ್ಲಿವೆ. ಪೆಲ್ಲಿಂಗ್‌ನಲ್ಲಿ ನಾವು ತಂಗಿದ್ದ ಲಾಡ್ಜಿನ ಕಿಟಕಿಯಿಂದ ಕಾಂಚನಜುಂಗ ಕಾಣಿಸಿತು. ಅದು ಹಿಮದ ಪರ್ವತ, ಅತ್ಯಂತ ಎತ್ತರದ ಪರ್ವತ. ಹಿಮ ಪರ್ವತದ ಮೇಲೆ ಬಿಸಿಲು ಬಿದ್ದಾಗ ಚೆನ್ನದ ಹೊದಿಕೆ ಹೊದಿಸಿದಂತೆ ಕಂಡಿತು ಮತ್ತು ಅದು ಸುಂದರವಾಗಿತ್ತು.

। ಶ್ರಾವ್ಯ ಕೆ., ೧ನೇ ತರಗತಿ



# ತುಪ್ಪದ ಕೊಳ ಸ್ವಚ್ಛ ಮಾಡಿದೆ


ನಾನು ದಸರಾ ರಜೆಗೆ ಚಿತ್ರದುರ್ಗದಲ್ಲಿರುವ ಅಜ್ಜಿಯ ಮನೆಗೆ ಹೋಗಿದ್ದೆ. ಒಂದು ದಿನ ಬೆಳಗ್ಗೆ ೬ ಗಂಟೆಗೆ ಕೋಟೆ ಹತ್ತಲು ಪ್ರಾರಂಭಿಸಿದೆ. ನಾನು ವೇಗವಾಗಿ ಹತ್ತುತ್ತಿದ್ದೆ. ಆದ್ದರಿಂದ ಸುಸ್ತಾಯಿತು. ಆಗ ಅಲ್ಲೇ ಕುಳಿತುಕೊಂಡೆ. ಅಲ್ಲಿ ಇದ್ದವರೆಲ್ಲ ನೀನು ಒಬ್ಬಳೇ ಬಂದಾ?! ನಿನ್ನ ಜೊತೆ ಯಾರೂ ಬರಲಿಲ್ವಾ? ಅಂಥ ಕೇಳಿದರು. ನನ್ನ ಮಾಮ ಇನ್ನೂ ಕೆಳಗೆ ಇದ್ದಾರೆ ಅಂಥ ಹೇಳಿ ನಾನು ಮತ್ತೆ ಕೋಟೆ ಹತ್ತಲು ಪ್ರಾರಂಭಿಸಿದೆ. ತುಪ್ಪದ ಕೊಳ ಮುಟ್ಟಿ ಅದರೊಳಗೆ ಹೋದೆ. ಅಲ್ಲಿ ನೀರು ನಿಂತಿತ್ತು. ಆದರೆ ಅದರ ಮೇಲೆ ಪ್ಲಾಸ್ಟಿಕ್‌ಗಳು ಬಿದ್ದಿದ್ದವು. ನನಗೆ ಅದನ್ನು ನೋಡಿ ತುಂಬಾ ಬೇಜಾರಾಯಿತು. ನನಗೆ ಸಾಧ್ಯವಾದಷ್ಟು ಸ್ವಚ್ಛ ಮಾಡಿ ತುಪ್ಪದ ಕೊಳದಿಂದ ಆಚೆಗೆ ಬಂದಾಗ ನನ್ನ ಮಾಮ ನನ್ನನ್ನು ಹುಡುಕುತ್ತಿದ್ದರು. ಆಮೇಲೆ ನಾನೇ ಹೋದೆ. ನಂತರ ಕೆಳಗೆ ಇಳಿದು ಮನೆಗೆ ಹೋದೆವು. ನನಗೆ ಕೋಟೆ ಹತ್ತಿದ್ದು ತುಂಬಾ ಇಷ್ಟವಾಯಿತು.





। ತನ್ಮಯಿ ಎಲ್., ೪ನೇ ತರಗತಿ

# ಭರ್ಜರಿ 'ಸೆಂಟ್ ಬರ್ನಾಡ್'



ನಾನು ನನ್ನ ಅಮ್ಮನ ಜತೆ ಕ್ಲಿನಿಕ್‌ಗೆ ಹೋದಾಗ ಒಂದು ದೊಡ್ಡ ನಾಯಿ ನೋಡಿದೆ. ಅದರ ಹೆಸರು ಸೆಂಟ್ ಬರ್ನಾಡ್. ಅದು ತುಂಬಾ ಭಯಾನಕ, ಅದಕ್ಕೆ ತುಂಬಾ ಕೂದಲಿವೆ. ಅದು ಕಚ್ಚುತ್ತದೆ ಎಂಬ ಭಯ ನನಗೆ. ಅದರ ಕೂದಲನ್ನು ಟ್ರಿಮ್ ಮಾಡಿಸೋಕೆ ಬಂದಿತ್ತು. ಅದು ತುಂಬಾ ಗಲಾಟೆ ಮಾಡುತ್ತಿತ್ತು. ಆಮೇಲೆ ಅದಕ್ಕೆ ಸ್ನಾನ ಮಾಡಿಸಿದರು. ಆವಾಗ ತುಂಬಾ ಸಣ್ಣದಾಗಿತ್ತು. ನಾನು ಮೊದಲ ಸಲ ನೋಡಿದಾಗ ಅದರ ದೇಹ ತುಂಬಾ ದಪ್ಪ ಇದೆ ಎಂದು ಅಂದುಕೊಂಡಿದ್ದೆ.



। ಅತೀತ, ೪ನೇ ತರಗತಿ

## ಅಕ್ಟೋಬರ್ ತಿಂಗಳಿನಲ್ಲಿ ಶಾಲೆಗೆ ಭೇಟಿ ನೀಡಿದ್ದವರು

೧. ಸವಿತಾ ಪಿ., ಪಿಎಂಸಿಎ, ಮೈಸೂರು
೨. ಕೌಶಿಕ್ ಎಂ.ಜಿ., ಡೆಂಟಿಸ್ಟ್, ನಾಯ್ಡುನಗರ, ಮೈಸೂರು
೩. ಸವಿತಾ ಟಿ.ಎಸ್., ಸಿಡಬ್ಲ್ಯೂಸಿ ಸದಸ್ಯರು, ನಜರ್‌ಬಾದ್, ಮೈಸೂರು
೪. ಚೇತನ್ ಜಿ.ಪುಟ್ಟಸ್ವಾಮಿ, ಇಂಜಿನಿಯರ್, ಬೋಗಾದಿ, ಮೈಸೂರು
೫. ಸುನೀತಾ, ಪ್ರೋಗ್ರಾಂ ಅಸೋಸಿಯೇಟ್
೬. ಶಿವಸ್ವಾಮಿ ಎಸ್. ಜೆಎಸ್‌ಎಸ್ ಡಿ.ಇಡಿ ಕಾಲೇಜು, ಸುತ್ತೂರು

## ಗೂಡು ಕಟ್ಟಿ, ಮೊಟ್ಟೆ ಇಟ್ಟು, ಮರಿ ಮಾಡಿದ ಪಕ್ಷಿಗಳು



ನಮ್ಮ ಮನೆಯ ಪಕ್ಕದಲ್ಲಿ ಗಿಡಮರಗಳು ಇವೆ. ಒಂದು ಮರದಲ್ಲಿ ಪಕ್ಷಿಗಳೆರಡು ಗೂಡು ಕಟ್ಟಲು ಶುರು ಮಾಡಿದವು. ದಿನಾ ಪಕ್ಷಿಗಳೆರಡು ಹುಲ್ಲು ಮತ್ತು ಕಡ್ಡಿಗಳಿಂದ ಗೂಡನ್ನು ಕಟ್ಟುತ್ತಿದ್ದವು. ಸುಮಾರು ದಿನಗಳ ನಂತರ ಆ ಗೂಡು ಪೂರ್ಣಗೊಂಡಿತು. ಆಮೇಲೆ ಪಕ್ಷಿ ಮೊಟ್ಟೆಗಳನ್ನು ಇಟ್ಟಿತು. ನಂತರ ಪಕ್ಷಿಗಳು ಮೊಟ್ಟೆಯನ್ನು ಒಂದರ ನಂತರ ಒಂದು ನೋಡಿಕೊಳ್ಳುತ್ತಿದ್ದವು. ಒಂದು ಪಕ್ಷಿ ಮೊಟ್ಟೆಗೆ ಕಾವು ಕೊಡಲು ಕೂಡುತ್ತಿತ್ತು. ಇನ್ನೊಂದು ಪಕ್ಷಿ ಆಹಾರ ಹುಡುಕಿಕೊಂಡು ಬರುತ್ತಿತ್ತು. ಸ್ವಲ್ಪ ದಿನಗಳ ನಂತರ ಮೊಟ್ಟೆಗಳಿಂದ ಮರಿಗಳು ಹೊರಬಂದವು.ಆನಂತರ ಅವುಗಳು ಖುಷಿಯಾಗಿದ್ದವು. ಅವುಗಳನ್ನು ನೋಡಿ ನನಗೂ ಖುಷಿಯಾಯಿತು.

| ಚಿನ್ಮಯಿ ಎಂ.ಎಸ್., ೫ನೇ ತರಗತಿ



## ಸುಂದರವಾದ ಮರ

ಒಂದು ಊರಿನ ಹೊರ ಭಾಗದಲ್ಲಿ ಒಂದು ದೊಡ್ಡ ಮರವಿತ್ತು. ಆ ಮರದಲ್ಲಿ ನೂರಾರು ಪಕ್ಷಿಗಳು ಗೂಡು ಕಟ್ಟಿದ್ದವು. ಆ ಮರವು ಜನರಿಗೆ ನೆರಳು, ಹಣ್ಣು, ಕಾಯಿ ಕೊಟ್ಟು ಸಹಾಯ ಮಾಡುತ್ತಿತ್ತು. ಒಂದು ಬಾರಿ ಜೋರಾದ ಮಳೆ, ಬಿರುಗಾಳಿ ಬಂದು ಮರವು ಮುರಿದು ಹೋಯಿತು. ಪಕ್ಷಿಗಳಿಗೆಲ್ಲ ಆಸರೆ ಇಲ್ಲದಂತಾಯಿತು. ಜನರಿಗೆ ಮರದಿಂದ ಉಪಯೋಗ ದೊರಕದಂತಾಯಿತು. ನಂತರ ಕೆಲವು ಬುದ್ಧಿವಂತ ಜನರು ಮರವನ್ನು ಉಳಿಸಿ – ಬೆಳೆಸಿ ಅದರಿಂದ ಹೇಗೆ ಪ್ರಯೋಜನ ಪಡೆಯಬಹುದೆಂದು ಯೋಚನೆ ಮಾಡಿದರು. ಬಿದ್ದು ಹೋಗಿದ್ದ ಮರದ ಜಾಗದಲ್ಲೇ ಗಿಡವನ್ನು ನೆಟ್ಟು ಅದಕ್ಕೆ ನೀರು, ಗೊಬ್ಬರ ಹಾಕಿದರು. ಸ್ವಲ್ಪ ದಿನಗಳ ನಂತರ ಗಿಡ ಬೆಳೆದು ಹೂವು, ಕಾಯಿ, ಹಣ್ಣು ಬಿಟ್ಟು ಸುಂದರವಾಗಿ ಬೆಳೆಯಿತು. ಪಕ್ಷಿಗಳಿಗೆ, ಜನರಿಗೆ ಖುಷಿ ಆಯಿತು.



| ಜ್ಞಾನಿಕ ಹರೀಶ್, ೩ನೇ ತರಗತಿ






## ಗೊಂಬೆಯ ಮದುವೆ

ಒಬ್ಬಳು ಹುಡುಗಿ ಇರುತ್ತಾಳೆ, ಅವಳು ಮದುವೆ ಮಾಡಿಕೊಳ್ಳುತ್ತಾಳೆ. ಅವಳಿಗೆ ಮಗುವೂ ಹುಟ್ಟುತ್ತದೆ. ನಂತರ ಅವಳ ಗಂಡನಿಗೆ ಅವಳ ಅಮ್ಮ ಮತ್ತೊಂದು ಮದುವೆ ಮಾಡಿಸುತ್ತಾಳೆ. ಏಕೆಂದರೆ, ಅವನ ಮೊದಲ ಹೆಂಡತಿ ಬಡವಿ. ಆಮೇಲೆ ಎರಡನೆಯ ಹೆಂಡತಿಗೂ ಮಗು ಹುಟ್ಟುತ್ತದೆ. ಸ್ವಲ್ಪ ದಿನ ಆದ ಮೇಲೆ ಎರಡೂ ಕುಟುಂಬಗಳೂ ಒಂದಾಗುತ್ತವೆ. ಒಂದು ಸಲ ಮೊದಲನೇ ಹೆಂಡತಿಯ ಮಗಳಿಗೆ ಗೊಂಬೆ ತೆಗೆದುಕೊಳ್ಳಬೇಕೆಂದು ಆಸೆಯಾಗುತ್ತದೆ. ಅವಳು ಅಂಗಡಿಗೆ ಹೋಗುತ್ತಾಳೆ. ಒಂದು ಗೊಂಬೆ ತೆಗೆದುಕೊಂಡು 'ಇದನ್ನು ಪ್ಯಾಕ್ ಮಾಡಿ' ಎನ್ನುತ್ತಾಳೆ. ಆಗ ವ್ಯಾಪಾರಿ 'ನಿಮ್ಮಂಥ ಬಡವರಿಗೆ ಗೊಂಬೆ ಕೊಡುವುದಿಲ್ಲ' ಎನ್ನುತ್ತಾನೆ. ಅವಳು ಬೇಸರದಿಂದ ಮನೆಗೆ ಹಿಂದಿರುಗುತ್ತಾಳೆ.

ಸ್ವಲ್ಪ ದಿನಗಳ ನಂತರ ಎರಡನೇ ಹೆಂಡತಿ ಮಗಳನ್ನು ನೋಡುವುದಕ್ಕೆ ಹುಡುಗ ಬರುತ್ತಾನೆ. ಅಲ್ಲಿಗೆ ಬಡವಳೂ ಹೋಗಿರುತ್ತಾಳೆ. ಹುಡುಗ ಯಾರೆಂದು ನೋಡಿದರೆ, ಆ ವ್ಯಾಪಾರಿ. ಅವನು ಹುಡುಗಿ ಒಪ್ಪಿಗೆ ಎಂದ ತಕ್ಷಣ ಬಡವಿ, 'ನಿಮ್ಮಂಥ ವ್ಯಾಪಾರಿಗಳಿಗೆ ಈ ಶ್ರೀಮಂತರನ್ನು ಕೊಡುವುದಿಲ್ಲ' ಎನ್ನುತ್ತಾಳೆ. ಆಗ ಅವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ನಂತರ ಅವನು ಗೊಂಬೆಯನ್ನು ಕೊಡುತ್ತಾನೆ. ಆಗ ಅವಳು ಇನ್ನೊಂದು ಗೊಂಬೆ ಖರೀದಿಸುತ್ತಾಳೆ. ಬಳಿಕ ಶ್ರೀಮಂತರ ಮದುವೆ ಮತ್ತು ಗೊಂಬೆಗಳ ಮದುವೆ ಎರಡೂ ಒಟ್ಟಿಗೆ ನಡೆಯುತ್ತವೆ.



– ಪ್ರಜ್ಞಾ ಎಂ.ಆರ್., ೫ನೇ ತರಗತಿ

## ಬಣ್ಣದ ಹಕ್ಕಿ-ಮಗುವೆ ಮಗುವೆ

ಹಕ್ಕಿ ಹಕ್ಕಿ ಬಣ್ಣದ ಹಕ್ಕಿ
ಹಾರುವೆ ನೀ ಮುಗಿಲೆತ್ತರಕೆ
ನಿನ್ನನು ನೋಡಲೆಷ್ಟು ಚಂದ
ಆಹಾ ಬಲು ಅಂದ...!

ಮಗುವೆ ಮಗುವೆ
ನೀ ನಕ್ಕರೆ ನನಗೊಲವೆ
ಬಾ ಪುಟ್ಟ ಹೆಜ್ಜೆಯನಿಟ್ಟು
ಅಂಬೆಗಾಲನು ಬಿಟ್ಟು...!



– ಪ್ರಜ್ಞಾ ಎಂ.ಆರ್., ೫ನೇ ತರಗತಿ

## ಕನ್ನಡ ರಾಜ್ಯೋತ್ಸವಕ್ಕೆ ಕವಿಗೋಷ್ಠಿಯ ಮೆರುಗು

**ಮೊದಲ ಪುಟದಿಂದ...**

ಮೊಬೈಲ್ ಹಾವಳಿಯ 'ಶಿ ಈಸ್ ಮೈ ಬಾಲ್' ಯಾರು ಎಂದು ತಿಳಿದು ನಗೆಯುಕ್ಕಿಸಿದರೆ, 'ಶಾಲೆಯ ಶಿಕ್ಷಕರ ಹೆಸರಿನ ಕವನ' ಕತೂಹಲ ತಂದಿತು. 'ಪ್ರಣತಿ', 'ಅರಿವು' ಕವನಗಳು ಪದ ಸಂಯೋಜನೆ, ಭಾವನೆಗಳ ತೀವ್ರತೆಯಿಂದ ಮತ್ತೊಮ್ಮೆ ಕೇಳಬೇಕು ಎನಿಸುವಂತಿದ್ದವು. ಪೋಷಕರಿಂದ ವ್ಯಕ್ತವಾದ ಸುಪ್ತಭಾವನೆ ಮತ್ತು ಕೌಶಲಕ್ಕೆ ಅರಿವು ಬಳಗದ ಹಾರ್ದಿಕ ಅಭಿನಂದನೆಗಳೊಡನೆ ಸಮಾರಂಭ ಮುಕ್ತಾಯವಾಯಿತು.

## ಎಲ್ಲವೂ ಕನ್ನಡವೇ ನನಗೆ

**ಮೊದಲ ಪುಟದಿಂದ...**

ಅನ್ನವನ್ನು ಎಲ್ಲರಂತೆ ದುಡಿದುಕೊಳ್ಳಲು ಇದು ಅವಕಾಶವನ್ನು ಒದಗಿಸಿದೆ. ಕನ್ನಡ ವಿದ್ವತ್ ಜಗತ್ತಿನ ಕೊಂಡಿಯಲ್ಲಿ ಕೆಲಸ ಮಾಡಲು ಪ್ರೇರೇಪಿಸಿದೆ. ಕನ್ನಡದ ಮೂಲಕ ಜಗತ್ತಿನ ಸಾಹಿತ್ಯವನ್ನು, ಸಂಸ್ಕೃತಿಗಳನ್ನು ನೋಡುವ ನೋಟವನ್ನು ಕೊಟ್ಟಿದೆ. ನಾನಿಂದು ಸಂಶೋಧನೆಗಳಲ್ಲಿ ತೊಡಗಿರುವುದಕ್ಕೆ ಕಾರಣವಾಗಿದೆ. ಕನ್ನಡ ದುಡಿಮೆಯಿಂದ ಬೆಳೆದ ನನ್ನ ಮಕ್ಕಳು ಜಗತ್ತನ್ನು ಸುತ್ತುತ್ತಿದ್ದಾರೆ. ನನಗೂ ಅವಕಾಶಗಳಿವೆ. ಕನ್ನಡ ನೆಲದ ಪರಿಸರ, ವಿಜ್ಞಾನ, ವಾಣಿಜ್ಯ, ತಂತ್ರಜ್ಞಾನ, ಕೃಷಿ, ರಾಜಕೀಯ ಮೊದಲಾಗಿ, ಕಂಪ್ಯೂಟರು ಮೊಬಯ್ಲೂ ಸೇರಿದಂತೆ ಕನ್ನಡ ಸಮಾಜದಲ್ಲಿನ ಎಲ್ಲವೂ ಕನ್ನಡವೇ ನನಗೆ. ನಾನು ಕನ್ನಡ ಮೇಷ್ಟ್ರು, ಕನ್ನಡದ ಕೆಲಸಗಾರ ಎಂದು ಹೇಳಿಕೊಳ್ಳುವ ಸಂತಸ ನನಗೆ ಇನ್ನೊಂದರಲ್ಲಿ ಕಂಡಿಲ್ಲ, ಕಾಣುತ್ತಿಲ್ಲ.



| ಆರ್.ಚಲಪತಿ, ಸೀನಿಯರ್ ಫೆಲೊ, ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ, ಮೈಸೂರು

# Playing with Arivu's children


"Sport teaches you character, it teaches you to play by the rules, it teaches you to know what it feels like to win and lose - it teaches you about life." Billie Jean King

Since I am a little part of Arivu, sport is the very thing which connects me to the children. Every day I am in school I am doing different types of sports. Sometimes volleyball, other times football or Frisbee. But the most liked game from different age groups is "Thief and Police". That is a game where two teams are playing against each other. The goal of the police team is to catch the thieves and bring them to jail. As easy as it sounds, as exhausting it is. Every time I am playing it for some minutes in the sun, I look like I showered with my clothes. Apart from that, it is a funny game which makes me and the children move which is good for the health. Also they are less physically active in class. Sadly the children only want to play separately with their same age class mates, this means when I play with 6th standard, I only play with them. Anyways I am really happy to play so much with the children. Because in Germany I used to do a lot of sports. In the future I can motivate more girls to play sports, even though a few are already in, especially when "Kho Kho" is being played.



**-Silvan Hoppe,** German Volunteer.

# North Karnataka in my view



As a preparatory work before starting our journey, Anna gave some homework to find the nearest route to Hubli, geographical features of the places we are planning to visit and many more. We even discussed about our homework in the classes and assemblies. Anna told us what and all should be thought about the tour and from where are we starting our journey. On 6th of November we all left from the Mysuru railway station almost at night 10:30. The journey was very calm and cool. I enjoyed first night journey with friends of this school. It was almost 7:30 in the morning when we reached Hubli railway station. We had breakfast at Hubli railway station and continued our journey to Gadaga Puttaraja Gavayi's Ashrama. On the way we visited Kolivaada which is the birth place of Kumara vyaasa, who is the author of "Karnata Bharata Katamanjari". We even met the 15 descendants of Kumarvyasa's family and saw some inscriptions written on palm leaves. Then we went to Puttaraja Gavayi's Ashrama, had lunch and rested there. That evening we went to Lakkundi, where there were a group of Jain temples built by the Kalyana Chalukyas. We even saw some sculpture of 13th century there. The next day we visited Badami, Pattadakallu, and Aihole. We saw the four cave temples in Badami and the sculptures carved there next in Pattadakallu. We saw the Dravidian and Aryan styles of Gopura built by the Badami Chalukyas. We also saw the parliament styled of Durga in the Aihole. We even visited Koodala sangama that day. We couldn't see the statue of Basavanna, as it was drowned under water because of flood. The next day we saw Golgumbaz, Barakaman and Ibrahim Roza in Vijayapura. We enjoyed eco system in Golgumbaz. This was the end of our tour. We all went back to Hubli railway station and came back to Mysuru the morning. Overall we got to know many things and even had a lot of fun in this tour.



**- Pushya,** 7th standard.

# Deepavali

Deepavali is called as the festival of lights. It is one of the biggest festivals of Hindus. On this day we decorate our houses with colourful rangoli and flowers. Deepavali means rows of diyas. Lighting diyas on this day is the main ritual. People illuminate their whole house by lighting diyas. We worship goddess Lakshmi on Amavasya. Fire crackers are burnt on this day. Deepavali without crackers are much beautiful. Let us not pollute our earth.



**-Karthik Hegde,** Standard 7



# Art workshop

I went to Mangalore one Saturday. Because there was an art workshop. The wildlife art workshop. There we've to see something and draw. I drew a plant for 2 hours. Wow! I drew almost unexpectedly and the artist gave me a badge triple wow!! It was a forest, we camped there. It was awe-some (1 lack wow!!!). it was a joy; like you're imagining it. Drawing is really cool.



**-Adyant Durga,** 4th standard



# मामनी का साहस

मामनी एक सात साल की लड़की है. मामनी चाय के बगीचे में चाय के पत्तो को अपने मालिक को देती थी. मामनी और उसकी भाई बगीचे के पास एक नदी में मछली पकड़कर उसके मालिक को देते थे. एक दिन उसके पापा कह रहे थे की " गणेश नाम एक हाथी ने हमारे बगीचे को सथ्यनाश किया था. गणेश से दूर रहना ". मामनी बगीचे से दूर जाकर एक फल खा रही थी. उसकी सुगंध से गणेश आगया. गणेश ने कहा , में एक छोटा सा मुन्ना सा हाथी हूँ . मुझे ये फल दो " . मामनी पापा का कहना मानकर गणेश को फल देदिया और घर आकर ये बात बताया. पापा ने शाभाशी दी.



**-तुषार एस.** 7 वी कक्षा